ಶ್ರೀ ಎಸ್. ಕರಿಯಪ್ಪ.—ಇದರಮೇಲೆ ಉಪಪ್ರಶ್ನೆ ಯೇನೂ ಇಲ್ಲ.

ಶ್ರೀ ಕೆ. ಲಕ್ಕಪ್ಪ.—ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ ಯಾವಾಗ ನಡೆಸಲಾಗುವುದು ?

ಶ್ರೀ ಟಿ. ಚನ್ನಯ್ಯ.—ಅದಕ್ಕೆಂದಿಗಾ ಬಿಲ್ಲು ಪಾಸಾದ ಮೇಲೆ ಕ್ಯಾಲೆಂಡರ್ ಆಫ್ ಈವೆಂಟ್ಸ್ ತಯಾರಿಸಿ ಚುನಾವಣೆ ನಡೆಸಲು ಕಾರ್ಯಕ್ರಮ ಕೈಕೊಳ್ಳುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಬೇಸಿಗೆಯಲ್ಲಿ ಇನ್ನು ಎರಡು ಮೂರು ತಿಂಗಳೊಳಗಾಗಿ ನಡೆಸಲು ಸಾಧ್ಯವೆ ?

ಶ್ರೀ ಟಿ. ಚನ್ನಯ್ಯ.—ಅಕ್ಟ್ ಪಾಸಾದ ನಂತರ ಕ್ರಮ ಕೈಕೊಳ್ಳಬೇಕು.

ಶ್ರೀ ಕೆ. ಲಕ್ಕಪ್ಪ.—ಸ್ವಲ್ಪ ನಿಧಾನವಾಗುವ ನಂದರ್ಭದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರ ಜೊತೆಗೆ ಹಂಗಾಮಿಯಾಗಿ ಒಂದು ಅಡ್ಮಿನಿಸ್ಟ್ರೇಟರಿ ಬೋರ್ಡನ್ನು ರಚಿಸಿ ಅದರಲ್ಲಿ ಈ ಅಸೆಂಬ್ಲಿ ಮೆಂಬರುಗಳಿಗೂ ಅವಕಾಶ ಕೊಟ್ಟು ಕಾರ್ಯಕಲಾಪ ನಡೆಸುವುದು ಸೂಕ್ತವಲ್ಲವೆ ?

ಶ್ರೀ ಟಿ. ಚನ್ನಯ್ಯ.—ಬಿಲ್ಲು ಪಾಸಾದಮೇಲೆ ಅಡ್ಮಿನಿಸ್ಟ್ರೇಟರಿ ಬೋರ್ಡನ್ನು ರಚಿಸುವುದು ಸರ್ಕಾರದ ಗಮನದಲ್ಲಿದೆ. ಅನಂತರ ಅದನ್ನು ಮಾಡುತ್ತೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಲನ್ನು ಈ ಸಭೆಯ ಮುಂದೆ ಯಾವಾಗ ಇಡಲಾಗುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಒಂದೆರಡು ದಿವಸಗಳಲ್ಲಿ ಮಂಡಿಸುತ್ತೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಡಿಸ್ಟ್ರಿಕ್ಟ್ ಬೋರ್ಡಿನ ಕೆಲಸ ತೃಪ್ತಿಕರವಾಗಿ ಆಗಲು ಒಂದು ನಾಮಿನೇಟೆಡ್ ಬೋರ್ಡನ್ನು ಮಾಡುವುದು ಅವಶ್ಯಕವಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಪ್ರಶ್ನೆ ಅರ್ಥವಾಗಲಿಲ್ಲ.

Sri H. C. LINGA REDDY.—Under the Act that is now in force, the work was entrusted to the Special Officers and alternatively it has been provided for a committee to assist the special officers. Is it under the contemplation of Government that pending elections and reconstitution of the Boards, to entrust the work to the committees to be nominated by Government to assist the Special Officer ?

Sri Kadidal MANJAPPA.—The intention is to hold elections of the District Boards as far as possible. Works have been carried on for about a year through the agency of these Special Officers. I do not think there is any need for appointing any committee once again'.

Sri H. C. LINGA REDDY.—Has it come to the notice of the Government that the District Board works are very much neglected and District Board roads are in very bad condition ?

Sri Kadidal MANJAPPA.—Even formerly roads were not very satisfactory, as the Hon'ble Member knows.

Sri H. C. LINGA REDDY.—What may be the possible time required for holding the District Board elections ?

Sri Kadidal MANJAPPA.—It all depends upon the Hon'ble Members.

ಶ್ರೀ ಎಸ್. ಸಿದ್ದಪ್ಪ.—ಜಿಲ್ಲಾ ಬೋರ್ಡಿಗೆ ಈಗ ಅಧ್ಯಕ್ಷರಾಗಿರುವ ಡೆಪ್ಯುಟಿ ಕಮಿಷನರಿಗೆ ತಮ್ಮ ಕೆಲಸದ ಜೊತೆಗೆ ಜಿಲ್ಲಾ ಬೋರ್ಡಿನ ಕೆಲಸ ಮಾಡಲು ಸರಿಯಾದ ಅವಕಾಶವಿಲ್ಲ. ಆದ್ದರಿಂದ ಜಿಲ್ಲಾ ಬೋರ್ಡು ರಚನೆಯಾಗುವವರೆಗೆ ನಂಸ್ಥಾನಾಮಳೆ ದೊಡ್ಡ ದೊಡ್ಡ ಕೆಲಸಗಳು ನಿಂತಿರುವುದನ್ನು ನಡೆಸಿ ಉತ್ತಮ ಪಡಿಸಲು ಒಂದು ವ್ಯವಸ್ಥೆ ಮಾಡಲು ಒಂದು ಸಮಿತಿಯನ್ನು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಅವರ ಕೈಕೆಳಗೆ ರಚಿಸುತ್ತೀರಾ ?

Sri Kadidal MANJAPPA.—Even that I have answered, Sir.

Sri K. S. VASAN.—Since the Hon'ble Minister just now said that the functions of the District Board are not being satisfactorily carried out through the Special Officers, do Government feel that there is no need for elections at all ?

Sri Kadidal MANJAPPA.—That inference cannot be drawn from the answer I have given.

Committee to investigate prohibition in the State (appointment).

Q.—807. **Sri SYDNEY A. THOMAS** (Nominated).—

Will the Government be pleased to state :—

(*a*) whether they will consider the desirability of appointing a Committee to investigate the working of Prohibition in order to be in a position to place their opinion before the Agarwal Committee;

(*b*) if not, in what manner the working of Prohibition is proposed to be assessed without having the benefit of competent and representative opinion ?

A.—**Sri T. CHANNIAH** (Minister for Public Health and Local Self-Government).—

(*a*) No.

(*b*) The working of Prohibition will be assessed through the Prohibition

(Sri T. CHANNIAH.)

Department and other social organisations.

Sri Sydney A. THOMAS.—Is it not natural, Sir, that the Prohibition Department, in order to justify its existence, will report only favourably on this prohibition issue and does not give a correct picture existing?

Sri T. CHANNIAH.—Government have not appointed any such Committee to make a report. Statistics are presented in their reports by the prohibition and other Excise staff. The steps that may be taken by Government largely depend upon the findings of the Agarwal Committee.

Sri Sydney A. THOMAS.—The Hon'ble Minister has misunderstood my question. My question is whether it is not natural if the Prohibition Department which is to be consulted, will not give a true picture of the existing situation in the dry areas?

Sri T. CHANNIAH.—We get the true picture of the working of prohibition in the State.

Sri Sydney A. THOMAS.—How?

Sri T. CHANNIAH.—By consulting the Prohibition and Excise Departments and other organisations in the State.

Sri Sydney A. THOMAS.—Which are those other organisations? may I know about a few of them?

Sri T. CHANNIAH.—There are a number of social organisations. They are carrying on propaganda aimed at the successful working of prohibition in the State.

Sri Sydney A. THOMAS. Will Government consider the labour organisations to be social organisations, Sir?

Sri T. CHANNIAH.—They are meant for the labour welfare.

Sri Sydney A. THOMAS.—Will the Government take the opinions of those labour organisations in formulating opinions to be placed before the Agarwal Committee, Sir?

Sri T. CHANNIAH.—It is open for them also to place their views before the Committee.

Sri Sydney A. THOMAS.—Would they be invited to place their views before the Committee?

Sri Kadidal MANJAPPA.—It is a question to be considered by that Committee.

Sri Sydney A. THOMAS.—Will the members of the Legislature be invited to send their opinions to Government?

Sri T. CHANNIAH.—They may also give their opinion.

ಶ್ರೀ ಎಂ. ಚಿಕ್ಕಲಿಂಗಯ್ಯ.—ಪಾನನಿರೋಧ ಇಲಾಖೆಯೆಂದರೆ ಪೋಲೀಸು ಇಲಾಖೆಯ ಅಥವಾ ಎಕ್ಸೈಜ್ ಇಲಾಖೆಯ ಅಥವಾ ಎರಡು ಇಲಾಖೆಗಳಿಗೂ ಸಂಬಂಧಪಟ್ಟಿದೆಯೇ?

ಶ್ರೀ ಟಿ. ಚನ್ನಯ್ಯ.—ಆ ಇಲಾಖೆಯನ್ನು ಪೋಲೀಸು ಇಲಾಖೆಗೆ ವಹಿಸಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗಿದ್ದ ಮೇಲೆ ಎಕ್ಸೈಜ್ ಇಲಾಖೆಗೇನೂ ಕರ್ತವ್ಯ ಇಲ್ಲವೆಂದು ತಿಳಿಯಬಹುದೆ?

ಶ್ರೀ ಟಿ. ಚನ್ನಯ್ಯ.—ಎಲ್ಲಿ ಎಕ್ಸೈಜ್ ಇಲಾಖೆಯ ಸಿಬ್ಬಂದಿ ಕೆಲಸಮಾಡುತ್ತಿದೆಯೋ ಅಲ್ಲಿ ಅವರ ಗಮನಕ್ಕೇನಾದರೂ ಅಕ್ರಮಗಳು ಬಂದರೆ ಪೋಲೀಸು ಇಲಾಖೆಗೆ ತಿಳಿಸಿದರೆ ನಿಲ್ಲಿಸಲು ಏರ್ಪಾಡುಮಾಡುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗಾದರೆ ಎಕ್ಸೈಜು ಇಲಾಖೆ ಸ್ವಲ್ಪ ಹೆಚ್ಚು ಕಡಮೆ ಟೆಕ್ನಿಕಲ್ ಇಲಾಖೆಯಿದ್ದ ಹಾಗೆ ಅಲ್ಲವೆ?

ಶ್ರೀ ಟಿ. ಚನ್ನಯ್ಯ.—ಹಾಗೆ ಹೇಳಬಹುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಟೆಕ್ನಿಕಲ್ ಇಲಾಖೆಯಾದ ಮೇಲೆ ಎಕ್ಸೈಜ್ ಇಲಾಖೆಗೆ ವಹಿಸಲು ಏನು ತೊಂದರೆ?

ಶ್ರೀ ಟಿ. ಚನ್ನಯ್ಯ.—ಹಿಂದೆ ಎಲ್ಲವನ್ನೂ ಕೂಲಂಕಷವಾಗಿ ಯೋಚನೆಮಾಡಿ ಎಗ್ಸಿಕ್ಯುಟಿವ್ ಪವರ್ ಇರುವ ಪೋಲೀಸು ಇಲಾಖೆ ಇದನ್ನು ನೋಡಿಕೊಳ್ಳಲು ಅವಕಾಶ ಕೊಟ್ಟರೆ ಜನರು ಅವರಿಗೆ ಹೆದರುತ್ತಾರೆ, ಹಾಗೆ ಮಾಡುವುದು ಒಳ್ಳೆಯದು ಎಂದು ಭಾವಿಸಿ ಅವರಿಗೆ ವಹಿಸಲಾಯಿತು.

ಶ್ರೀ ಕೆ. ಪುಟ್ಟಸ್ವಾಮಿ.—ಪಾನನಿರೋಧ ಇಲಾಖೆಯೆಂದರೆ ಯಾವುದು?

ಶ್ರೀ ಟಿ. ಚನ್ನಯ್ಯ.—ಪೋಲೀಸು ಇಲಾಖೆಯಿಂದ ಕಾರ್ಖಸ್ಟೇಬಲ್ಲುಗಳು, ದಫೇದಾರರು, ಸಬ್ ಇನ್ಸ್ಪೆಕ್ಟರು ಮುಂತಾದವರಲ್ಲಿ ಕೆಲವು ಸಿಬ್ಬಂದಿಯನ್ನು ಲೆಂಡ್ ಮಾಡಿದ್ದಾರೆ. ಅವರು ಡಿಟೆಕ್ಟ್ ಮಾಡಿ ವರದಿ ಮಾಡುತ್ತಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಎಲ್ಲಿಗೆ ಲೆಂಡ್ ಮಾಡಿರುವುದು?

ಶ್ರೀ ಟಿ. ಚನ್ನಯ್ಯ.—ಪೋಲೀಸು ಇಲಾಖೆಯಲ್ಲೇ ಇರುತ್ತಾರೆ. ಆದರೆ ವಿಜಿಲೆಂಟಾಗಿ ನೋಡಿಕೊಳ್ಳಬೇಕೆಂದು ಅವರನ್ನು ನೇಮಿಸಿರುತ್ತಾರೆ.

Sri K. PUTTASWAMY.—Is there a different section amongst the police or is it one of the duties that the police in prohibition area?

ಶ್ರೀ ಟಿ. ಚನ್ನಯ್ಯ.—ಪ್ರತ್ಯೇಕವಾಗಿ ಏರ್ಪಾಡು ಮಾಡಿ ಅವರು ಅವರ ರೆಗ್ಯುಲರ್ ಡ್ಯೂಟೀಸ್ ಜೊತೆಗೆ ಎಕ್ಸೈಜ್ ಇಲಾಖೆ ಕೆಲಸವನ್ನೂ ನೋಡಿಕೊಳ್ಳಬೇಕೆಂದು ಹೇಳಿದೆ.

ಶ್ರೀ ಕೆ. ಪುಟ್ಟಸ್ವಾಮಿ.— ಅವರು ಪಾನ ನಿರೋಧ ಅಷ್ಟು ಯಶಸ್ವಿಯಾಗದಿರುವುದಕ್ಕೆ ಮದ್ದತು ಮಾಡುತ್ತಿದ್ದಾರೆಂದು ಪದೇ ಪದೇ ಫಿರ್ಯಾದು ಬರುತ್ತಿಲ್ಲವೆ ?

ಶ್ರೀ ಟಿ. ಚನ್ನಯ್ಯ.— ಆ ತರಹ ದೂರುಗಳು ಸಹ ಬರುತ್ತಿವೆ.

ಶ್ರೀ ಕೆ. ಪುಟ್ಟಸ್ವಾಮಿ.— ಹಾಗಿದ್ದರೂ ಪುನಃ ಅವರನ್ನೇ ಈ ವಿಚಾರದಲ್ಲಿ ಕನ್ಸಲ್ಟ್ ಮಾಡುವುದಾದರೆ ಕಳ್ಳನೋರಪ್ಪನ್ನ ಕಣಿಕೇಳಿದ ಹಾಗಾಗುವುದಿಲ್ಲವೆ ?

ಶ್ರೀ ಟಿ. ಚನ್ನಯ್ಯ.— ಅವರಲ್ಲೇ ನಂಬಿಕೆಯಿಲ್ಲದಿದ್ದರೆ ಇನ್ನಾವ ಇಲಾಖೆಯಲ್ಲಿ ನಾವು ನಂಬಿಕೆಯಿಡುವುದು ?

ಶ್ರೀ ಕೆ. ಪುಟ್ಟಸ್ವಾಮಿ.— ನಂಬಿಕೆ ಇರುವ ಪ್ರಶ್ನೆ ಅಲ್ಲ. ಕೆಲಸಮಾಡುವವರು ಸರಿಯಾಗಿ ಕೆಲಸ ಮಾಡಿದ್ದರೆ ಯಶಸ್ವಿಯಾಗುತ್ತದೇ ಇತ್ತು. ಅದಕ್ಕೇ ಈ ಕೆಲಸ ಸರಿಯಾಗಿ ನಡೆಯುತ್ತಾ, ಇಷ್ಟೇ ಇಲ್ಲವೇ ಎಂಬುದನ್ನು ನೋಡುವುದಕ್ಕೆ ಬೇರೆ ಇನ್ನಾವುದಾದರೂ ಒಂದು ಕಮಿಟಿಯೋ ಅಥವಾ ಸಂಸ್ಥೆಯೋ ಇರುವುದು ಮೇಲು ಅಲ್ಲವೇ ?

ಶ್ರೀ ಟಿ. ಚನ್ನಯ್ಯ.— ಹಿಂದೆ ಕಮಿಟಿಗಳನ್ನು ಕೂಡ ಏರ್ಪಾಡುಮಾಡಲಾಗಿತ್ತು. ಆದರೆ ಅವರುಗಳಿಂದ ಯಶಸ್ವಿಯಾಗಿ ಕೆಲಸ ನಡೆಯಲ್ಲಿಲ್ಲ ಎಂಬುದಾಗಿ ಸರ್ಕಾರದವರಿಗೆ ತಿಳಿದು ಬಂದ ನಂತರ ಪೋಲೀಸ್ ಇಲಾಖೆಗೇ ಈ ಕಾರ್ಯಕ್ರಮವನ್ನು ವಹಿಸಿದರು. ಇದರಿಂದ ಎಫಿಷೆಂಟ್ ಆಗಿ ಚೆಕ್‌ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ ಹಿಂದೆಯೇ ಮಾಡಿದ್ದಾರೆ.

Mr. SPEAKER.—The question is :— you have entrusted the sending of reports regarding the working of the Prohibition to the Police Department, which is authorised to look after the prohibition work. Does the Government expect to receive a fair report from that Department ?

Sri T. CHANNIAH.—Yes. The working of Prohibition is entrusted to the Police Department. The officers of that Department send their report to Government. They are the proper authorities. They know where illicit distillation and other such illegal acts are done. It is they who could be expected to properly assess and send reports regarding the working of Prohibition.

Sri K. PUTTASWAMY.—Are you having any other independent body to report on the success of Prohibition ?

Sri T. CHANNIAH.—At present, we have no other body appointed by Government. Generally, we sense public opinion also. Opinions of social organisations which have been working for Prohibition are also got.

ಶ್ರೀ ಪಿ. ಆರ್. ರಾಮಯ್ಯ.— ಸ್ವಾಮಿ, ಈ ಪ್ರೊಹಿಬಿಷನ್ ವರ್ಕ್ ಆಗುತ್ತಾ, ಇರುವ ರೀತಿಯಲ್ಲಿ ಫಲಪ್ರದವಾಗಿ ಆಗುತ್ತಾ, ಇದೆ ಎಂದು ಹೇಳಿ ವರದಿ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.— ಫಲಪ್ರದವಾಗಿ ನಡೆಯುತ್ತಾ ಇದೆ ಎಂದು ಹೇಳಿ ಇಲಾಖೆಯವರು ಸರ್ಕಾರದವರಿಗೆ ವರದಿ ಮಾಡಿದ್ದಾರೆ. ಅದರಿಂದ ಸರಿಯಾಗಿ ನಡೆಯುತ್ತಾ ಇದೆ ಎಂದು ಗೊತ್ತಾಗಿದೆ.

ಶ್ರೀ ಪಿ. ಆರ್. ರಾಮಯ್ಯ.— ಆದ್ದರಿಂದ ಪುನಃ ಅವರ ಅಭಿಪ್ರಾಯವನ್ನು ತೆಗೆದು ಕೊಳ್ಳಬೇಕಾದ ಅವಶ್ಯಕತೆ ಏನಿದೆ ?

ಶ್ರೀ ಟಿ. ಚನ್ನಯ್ಯ.— ನಾವೇನೂ ಬೇರೆ ರೀತಿಯಲ್ಲಿ ಅಭಿಪ್ರಾಯಗಳನ್ನು ತೆಗೆದು ಕೊಳ್ಳಬೇಕೆಂದು ಉದ್ದೇಶಿಸಿಲ್ಲ. ಮತ್ತೆ ನದ್ಯಕ್ಕೆ ಅಭಿಪ್ರಾಯ ತೆಗೆದುಕೊಳ್ಳುಬೇಕಾದ ಅವಶ್ಯಕತೆಯೂ ಇಲ್ಲ.

ಶ್ರೀ ಪಿ. ಆರ್. ರಾಮಯ್ಯ.— ಆದರೆ ತಾವು ಉತ್ತರ ಕೊಟ್ಟಿರುವುದರಲ್ಲಿ (a) ಗೆ ಉತ್ತರವಾಗಿ 'No' ಎಂದು ಹೇಳಿದ್ದೀರಿ. (b) ನಲ್ಲಿ "The Working of Prohibition will be assessed through the Prohibition Department and other social organisations" ಎಂದು ಹೇಳಿದ್ದೀರಿ. ಅಂದಮೇಲೆ ಪ್ರೊಹಿಬಿಷನ್ ಡಿಪಾರ್ಟ್‌ಮೆಂಟಿನವರು ಇದು ಬಹಳ ಯಶಸ್ವಿಯಾಗಿ ನಡೆಯುತ್ತಾ ಇದೆ ಎಂದು ಅಭಿಪ್ರಾಯ ಕೊಟ್ಟಿದ್ದಾರೆ ಎಂಬುದು ತಮ್ಮ ಉತ್ತರವೇ ?

ಶ್ರೀ ಟಿ. ಚನ್ನಯ್ಯ.— ಹಿಂಯೂ ಕೂಡ ಅವರು ಇದೇ ಅಭಿಪ್ರಾಯ ಕೊಟ್ಟಿದ್ದಾರೆ. ಈ ಸಾರಿಯೂ ಅದೇ ರೀತಿ ಯಶಸ್ವಿಯಾಗಿ ಕೆಲಸ ನಡೆದಿದೆ. ಪ್ರೊಹಿಬಿಷನ್ ಜಾರಿಯಲ್ಲಿದೆ ಎಂದು ವರದಿಮಾಡಿದ್ದಾರೆ. ಮತ್ತು ಅಗರ್‌ವಾಲಾ ಕಮಿಟಿಯವರು ಪ್ಲಾನಿಂಗ್ ಕಮಿಷನ್ ಡೈರೆಕ್ಷನ್ ಪ್ರಕಾರ ಒಂದು ಸಲಹೆ ಕೇಳಿ ತೀರ್ಮಾನ ಕೊಟ್ಟನಂತರ ನಮ್ಮ ಮೈಸೂರು ಸರ್ಕಾರದವರು ಇಲಾಖೆಯವರಮತ್ತು ಸಾರ್ವಜನಿಕರ ಅಭಿಪ್ರಾಯ ತೆಗೆದುಕೊಳ್ಳಬೇಕೆಂದೂ ಮತ್ತು ಕೆಲವು ಆರ್ಗನೈಸೇಷನ್‌ನವರ ಅಭಿಪ್ರಾಯವನ್ನು ಕೂಡ ಶೇಖರಿಸಿ ಮುಂದೆ ಅವರ ಅಭಿಪ್ರಾಯವನ್ನು ಯಾವರೀತಿ ಕೊಡಬೇಕೆಂಬುದಕ್ಕೆ ಈ ರೀತಿ ಮಾಡಿದ್ದಾರೆ.

ಶ್ರೀ ಪಿ. ಆರ್. ರಾಮಯ್ಯ.—Social organisation ಎಂದು ನಮೂದಿಸಿದ್ದಿರಲ್ಲಾ ಅವರು ಏನು ಅಭಿಪ್ರಾಯ ಕೊಟ್ಟಿದ್ದಾರೆ ಮತ್ತು ಯಾವ ಸೋಷಿಯಲ್ ಆರ್ಗನೈಸೇಷನ್ನಿನವರು ಅಭಿಪ್ರಾಯ ಕೊಟ್ಟಿದ್ದಾರೆ ?

ಶ್ರೀ ಟಿ. ಚನ್ನಯ್ಯ.— ಸೋಷಿಯಲ್ ಆರ್ಗನೈಸೇಷನ್ನಿನವರಿಂದ ನಾವು ಯಾವ ಅಭಿಪ್ರಾಯವನ್ನೂ ತರಿಸಿಕೊಂಡಿಲ್ಲ.

ಶ್ರೀ ಪಿ. ಆರ್. ರಾಮಯ್ಯ.— ತಾವೇ ಇಲ್ಲಿ "the working of the Prohibition will be assessed through the Prohibition Department and other social organisations ಎಂದು ಹೇಳಿದ್ದೀರಿ. ಯಾವಯಾವ ಸೋಷಿಯಲ್ ಆರ್ಗನೈಸೇಷನ್‌ನವರ ಅಭಿಪ್ರಾಯ ಕ್ರೋಢೀಕರಿಸಿದೆ ?

ಶ್ರೀ ಟಿ. ಚನ್ನಯ್ಯ.— ಯಾವ್ಯಾವುದು ಅವಶ್ಯಕವೋ ಅಂಥ ಆರ್ಗನೈಸೇಷನ್ ಅವರಿಂದ ತರಿಸಿಕೊಳ್ಳಲಾಗುತ್ತದೆ.

ಶ್ರೀ ಪಿ. ಆರ್. ರಾಮಯ್ಯ.— ಈಗ ಪಾನನಿರೋಧವನ್ನು ಯಾವಕಡೆ ಜಾರಿಗೆ ತಂದಿಲ್ಲವೊ ಅಲ್ಲೂಕೂಡ ಜಾರಿಗೆ ತರಬೇಕಾದರೆ ಹಣಕಾಸಿನ ಸಮಸ್ಯೆಯ ಕಾರಣದಿಂದ ಜಾರಿಗೆ ತರಲಿಕ್ಕೆ ಆಗುತ್ತಾ, ಇಲ್ಲ ಅಲ್ಲವೇ ?

Mr. SPEAKER.—It does not arise. The Hon'ble Minister need not reply.

Sri K. S. VASAN.—Has the Government assessed the working of Prohibition in Kolar Gold Fields through the Department and other social organisations there ?

Sri T. CHANNIAH.—Yes.

Sri K. S. VASAN.—What is the assessment, Sir ?

Sri T. CHANNIAH.—The opinion is that Prohibition is working successfully in that area.

Sri K. S. VASAN.—Will the Government be pleased to state if all the three members of this House from Kolar Gold Fields Constituency unanimously assert that it is a thorough failure, what would the Government feel about it ?

Sri Kadidal MANJAPPA.—We cannot change the existing law, if only three members unanimously assert that the law should be changed.

Sri K. S. VASAN.—Three members of that constituency, Sir. I want to know whether Government would rely on the Police Department or on the very clear opinion furnished by three members of that Constituency to this House.

Sri Kadidal MANJAPPA.—We rely on public opinion in general. We rely on the Hon'ble Members of this august House and we rely upon the opinion furnished by our own officers.

Sri K. S. VASAN.—Are the Government aware that the entire mass of workers in Kolar Gold Fields are on a move for general strike for scrapping Prohibition and also that the other citizens of Kolar Gold Fields have agreed to observe hartal on this issue ?

Sri Kadidal MANJAPPA.—No. The people in general are in favour of retaining Prohibition.

Sri K. S. VASAN.—Are the Government assessing the success of Prohibition on the basis the of number of cases put up ?

Sri Kadidal MANJAPPA.—Not on the number of cases. It is on other various factors. For instance, the general standard of living at present prevailing among the people who are addicted to drinks formerly, the opinion of the public in general and other considerations.

Sri K. S. VASAN.—Have the Government come to know that the Police Sub-Inspector in charge of Prohibition work in Kolar Gold Fields is placed under suspension by the Department for alleged offences of drunkenness and molestation of a woman ?

Sri T. CHANNIAH.—Notice.

ಶ್ರೀ ಎ. ಮುನಿಯಪ್ಪ.—ಕೆ. ಜಿ. ಎಫ್. ಮುಂತಾದ ಕಡೆಗಳಲ್ಲಿ ಈ ಪಾನ ನಿರೋಧ ಇಲ್ಲದೆ ಇರುವುದರಿಂದ ಇದು ಒಂದು ಗೃಹ ಕೈಗಾರಿಕೆ ಯಾಗಿದೆ ಎಂದು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಶಾಸನ ಸಭೆಯಲ್ಲಿ ಹೇಳಿರುವುದನ್ನು ಬ್ಲ್ಯಾಪಕ ಮಾಡು ತ್ತೇನೆ. ಅದಕ್ಕೆ ಉತ್ತರ ಏನು, ಸ್ವಾಮಿ ?

ಶ್ರೀ ಟಿ. ಚನ್ನಯ್ಯ.—ಗೃಹ ಕೈಗಾರಿಕೆಯಾಗಿ ನಡೆ ಯುತ್ತಾ ಇದೆ ಎಂದು ನಾನು ಹೇಳಲಿಲ್ಲ. ಅನೇಕ ಸ್ಥಳಗಳಲ್ಲಿ ಇಲ್ಲಿಸಿಟ್ ಡಿಸ್ಟಿಲೇಷನ್ ನಡೆಯುತ್ತಾ ಇದೆ ಎಂದು ಸರ್ಕಾರದವರಿಗೂ ಕೂಡ ವರದಿಯಾಗಿದೆ ಎಂದು ತಿಳಿಸಿದೆ.

ಶ್ರೀ ಎ. ಮುನಿಯಪ್ಪ.—ಆ ವರದಿಯ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ, ಸ್ವಾಮಿ ?

ಶ್ರೀ ಟಿ. ಚನ್ನಯ್ಯ.—ಎಲ್ಲೆಲ್ಲಿ ಈ ಕೇಸುಗಳನ್ನು ಬುಕ್ ಮಾಡಿದ್ದಾರೋ ಅಲ್ಲೆಲ್ಲಾ ಸಂಬಂಧಪಟ್ಟ ಇಲಾಖೆಯವರು ಕೋರ್ಟಿನಲ್ಲಿ ಕೇಸುಹಾಕಿ ಅವರಿಗೆ ಜುಲ್ಮಾನೆ ಹಾಕಿಸಿದ್ದಾರೆ ಮತ್ತು ಜೈಲಿಗೆ ಕಳುಹಿಸಿ ದ್ದಾರೆ.

ಶ್ರೀ ಎ. ಮುನಿಯಪ್ಪ.—ಚಿಕ್ಕಬಳ್ಳಾಪುರದಲ್ಲಿ ಯುಗಾದಿ ಹಬ್ಬದ ಮಾರನೇ ದಿವಸ ಪೋಲೀಸ್ ಡಿಪಾರ್ಟ್‌ಮೆಂಟಿನ ಕಾನ್ಸ್‌ಟೇಬಲ್‌ಗಳು ಕುಡಿದಿದ್ದ ವರನ್ನು ಮನೆಗೆ ಕರೆದುಕೊಂಡು ಹೋಗಿ ಮಲಗಿಸಿ ರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

Sri P. M. SWAMIDURAI.—Sir, the Minister was pleased to say that the public of Kolar Gold Fields was in favour of Prohibition. Is it not a fact that when the Minister visited that place, the leading citizens and representatives of the place and the labour leaders, plus the public demanded that Prohibition should be scrapped ?

Sri T. CHANNIAH.—In the gathering present on that day, some were in favour of removal of Prohibition and some were in favour of retaining Prohibition.

Sri P. M. SWAMIDURAI.—Sir, here I would like to state that the Hon'ble Minister is giving a contradictory reply. Majority of people were for scrapping Prohibition and only one . . .

Mr. SPEAKER.—Here, the matter cannot be discussed. You may take the answer and make use of it on other occasions.

Sri SWAMIDURAI.—I seek the protection of the Chair, Sir. The Minister is stating contrary to what has taken place. How am I to keep quiet, Sir?

Mr. SPEAKER.—I understand the feeling of the Hon'ble Member. But during question-hour, we cannot go beyond the procedure prescribed. You can only elicit information, even though they are contrary. You can take the answers even though they are contrary and make use of the same on other occasions.

Sri P. M. SWAMIDURAI.—So, we will have to take what the Minister says.

Mr. SPEAKER.—Yes.

12-30 P.M.

Sri P. M. SWAMIDURAI.—Is it not a fact that the Kolar District Congress Committee itself recommended the scrapping of Prohibition? Why not the Government scrap of Prohibition in the K.G.F.?

Mr. SPEAKER.—The representation made by the Congress Committee itself is not sufficient, perhaps.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ಪಾನ ನಿರೋಧ ಸಮಿತಿಗೆ ಛೇರ್ಮನ್ನರು ಯಾರು ಮತ್ತು ಸದಸ್ಯರುಯಾರು?

ಶ್ರೀ ಟಿ. ಚನ್ನಯ್ಯ. ಸಮಿತಿಯನ್ನೇ ಮಾಡದಿರು ವಾಗ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗಲಾದರೂ ತಾವು ಈ ಪಾನ ನಿರೋಧದ ಬಗ್ಗೆ, ಈ ಜಿಲ್ಲಾ ಮತ್ತು ತಾಲ್ಲೂಕ್ ಲೆವಲ್‌ಗಳಲ್ಲಿ ಸಮಿತಿಗಳನ್ನು ತಾವೇಕೆ ಏರ್ಪಾಡು ಮಾಡಬಾರದು? ಹಾಗೆ ಮಾಡಿದರೆ ಈ ಕುಡಿತವನ್ನು ತಪ್ಪಿಸುವುದಕ್ಕೆ ಅನುಕೂಲವಾಗುವುದಿಲ್ಲವೇ?

ಶ್ರೀ ಟಿ. ಚೆನ್ನಯ್ಯ.—ಆ ಅಗರವಾಲ ಸಮಿತಿಯ ವರದಿ ಬಂದನಂತರ ಅದನ್ನೆಲಾ ಆಲೋಚನೆ ಮಾಡ ಲಾಗುತ್ತದೆ.

ವೈ. ಎಂ. ಚಂದ್ರಶೇಖರಯ್ಯ.—ಇಡೀ ಭಾರತಾದ್ಯಂತವೂ ಈ ಪಾನ ನಿರೋಧವನ್ನು ಜಾರಿಗೆ ತರುವುದಕ್ಕೆ ಕಾಸ್ಟಿಟ್ಯೂಷನ್ನಲ್ಲಿ ಅವಕಾಶ ಮಾಡಿಲ್ಲವೇ?

(No answer)

ಶ್ರೀ ಡಿ. ಆರ್. ಕರಿಗೌಡ.—ಈಗ ಆ ಅಗರವಾಲ ರವರ ಸಮಿತಿಯನ್ನು ನೇಮಕ ಮಾಡಿರುವುದು ಅವರು ಇದು ಯಶಸ್ವಿಯಾಗಿ ಜರುಗುವುದಕ್ಕೆ ಏನೇನು ಪ್ರಯತ್ನಗಳನ್ನು ನಡೆಸಬೇಕೆಂಬುದನ್ನು ಪರಿಶೀಲನೆ ಮಾಡುವುಕ್ಕಾಗಿ ಅಲ್ಲವೆ?

ಶ್ರೀ ಟಿ. ಚೆನ್ನಯ್ಯ.—ಆ ವಿಚಾರಗಳನ್ನೆಲ್ಲಾ ನಾನು ಈಗಲೇ ಹೇಳುವುದಕ್ಕೆ ಆಗುವುದಿಲ್ಲ. ಈಗ ಅವರು ಇದನ್ನು ಯಶಸ್ವಿಗೊಳಿಸುವುದಕ್ಕಾಗಿ ಅನೇಕ ಪ್ರಪೋಜಲ್‌ಗಳನ್ನು ಮಾಡುತ್ತಿದ್ದಾರೆ. ಇದನ್ನು ದೇಶಾದ್ಯಂತವೂ ಸಂಪೂರ್ಣವಾಗಿ ಜಾರಿಗೆ ತರಬೇಕೆಂದಿದೆಯೇ ಹೊರತು ಹಿಂದಕ್ಕೆ ಹೋಗಬೇಕೆಂಬ ಮಾತೇ ಇಲ್ಲ.

ಶ್ರೀ ಡಿ. ಆರ್. ಕರಿಗೌಡ.—ಈ ದಿವಸ ಆ ಅಗರವಾಲಾ ಅವರ ಸಮಿತಿಯನ್ನು ನೇಮಕ ಮಾಡಿರುವುದು ಪಾನ ನಿರೋಧವನ್ನು ದೇಶಾದ್ಯಂತವೂ ಜಾರಿಗೆ ತಂದು ಇದನ್ನು ಸಂಪೂರ್ಣವಾಗಿ ಯಶಸ್ವಿಗೊಳಿಸಬೇಕಾಗಿದ್ದರೆ ಏನೇನು ಕಾರ್ಯಕ್ರಮಗಳನ್ನು ಏರ್ಪಡಿಸಬೇಕೆಂಬುದರ ಬಗ್ಗೆಯೋ ಅಥವಾ ಇದನ್ನು ತಪ್ಪಿಸಬೇಕೆಂಬುದರ ಬಗ್ಗೆಯೇನಾದರೂ ಅವರು ಆಲೋಚನೆ ಮಾಡುತ್ತಿದ್ದಾರೋ?

ಅಧ್ಯಕ್ಷರು.—ಆ ವಿವರಗಳೆಲ್ಲಾ ನಮಗೆ ಗೊತ್ತಿಲ್ಲ ವೆಂದು ಹೇಳುತ್ತಿದ್ದಾರೆ.

ಶ್ರೀ ಟಿ. ಚನ್ನಯ್ಯ.—ಅವರ terms of reference ಏನಿದೆಯೋ ಅದು ನಮಗೀಗ ಗೊತ್ತಿಲ್ಲ. ಆ ಸಮಿತಿಯವರು ಮುಂದೆ ಈ ಕಾರ್ಯವನ್ನು ಯಾವ ರೀತಿ ಮುಂದುವರಿಸಿಕೊಂಡು ಬರಬೇಕೆಂದು ಸಲಹೆ ನೀಡುತ್ತಾರೋ ಆ ರೀತಿ ನಾವು ಮಾಡುತ್ತೇವೆ. ಅವರು ಈ ವಿಚಾರದಲ್ಲಿ ಪ್ರತಿಯೊಂದು ಅಂಶವನ್ನೂ ಕೂಲಂಕುಷವಾಗಿ ಪರಿಶೀಲನೆ ಮಾಡಿದ ತರುವಾಯ ಅವರು ಪ್ಲಾನಿಂಗ್ ಸಮಿತಿಗೆ ತಿಳಿಸುತ್ತಾರೆ. ಅನಂತರ ಅವರಿಂದ instruction ಬರುತ್ತದೆ. ಆಗ ನಾವು ಇದನ್ನು ಆಲೋಚನೆ ಮಾಡಿ ಅದಕ್ಕನುಸಾರವಾಗಿ ಮಾಡಲಾಗುವುದು.

Sri M. LINGANNA.—May I know whether in the light of the criticisms made, the Government are thinking of transferring the Prohibition staff from one taluk to another?

Sri T. CHANNIAH.—We are adopting the same policy.

ಶ್ರೀ ವಿ. ವೆಂಕಟಪ್ಪ.—ತಮಗೆ ಇದುವರೆಗೂ ಬಂದಿರತಕ್ಕಂಥ ರಿಪೋರ್ಟುಗಳಿಂದ ಈ ಪಾನನಿರೋಧ ಈಗ ದೇಶದಲ್ಲಿ ಯಶಸ್ವಿಯಾಗಿ ನಡೆಯುತ್ತಿದೆಯೇ ಅಥವಾ ಇಲ್ಲವೇ ಎನ್ನತಕ್ಕ ಬಗ್ಗೆ ತಮ್ಮ ಅಭಿಪ್ರಾಯವೇನು?

ಶ್ರೀ ಕಡಿದಾಳ್ ಮಂಜಪ್ಪ.—ಆದರೆ ಈ ಪಾನನಿರೋಧದ ವಿಚಾರದಲ್ಲಿ ಕೆಲವರು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿರಬಹುದು. ಆದರೆ ಜನರು ಹಾಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಸಹಜ. ಅಂತೂ ಒಟ್ಟಿನಲ್ಲಿ ನಾವು ಈ ವಿಚಾರವನ್ನು ಪರಿಶೀಲನೆ ಮಾಡಿದರಲ್ಲಿ—ನಮಗೆ ಬಂದಿರತಕ್ಕಂಥ ಅಂಕಿ ಅಂಶಗಳು ಮತ್ತು ಸಾರ್ವಜನಿಕರ ಅಭಿಪ್ರಾಯಗಳ ಆಧಾರದ ಮೇಲೆ ಇದು ಯಶಸ್ವಿಯಾಗಿ ನಡೆಯುತ್ತಿದೆಯೆಂದು ತಿಳಿದು ಬಂದಿದೆ. ಅಲ್ಲದೆ ಕಳ್ಳಭಟ್ಟಿ ತಯಾರಿ ಕೂಡ ಬಹಳ ಮಟ್ಟಿಗೆ ಕಮ್ಮಿಯಾಗಿದೆ.

ಶ್ರೀ ವಿ. ವೆಂಕಟಪ್ಪ.—ಈ ಪಾನನಿರೋಧ ಅಷ್ಟು ಜಯಪ್ರದವಾಗಿಲ್ಲ ಎಂದು ಮಾನ್ಯ ಮಂತ್ರಿಗಳು ಮೇಲ್ಮನೆಯಲ್ಲಿ ಹೇಳಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಕಳ್ಳಭಟ್ಟಿ ಸಾರಾಯಿಯ ಕುಡಿತವಿತ್ತು. ಅದು ಈಗ ಕಡಿಮೆಯಾಗುತ್ತಿದೆ ಎಂದು ಹೇಳಿದ್ದಾರೆ.